**Kannada Prabha**

Date: 29-11-2019 Page No: 05

Edition: Mysore Language: Kannada

# 40 ಅಡಿ ಬಾವುಟ ಹಾರಿಸಿ ರಾಜ್ಯೋತ್ಸವ

**ಮೈಸೂರು**: ನಗರದ ಎಸ್‌ಡಿಎಂ-ಐಎಂಡಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ವಿಶೇಷವಾಗಿ 40 ಅಡಿ ಉದ್ದದ ಕನ್ನಡ ಬಾವುಟ ಹಾರಿಸುವ ಮೂಲಕ ಆಚರಿಸಲಾಯಿತು.



ಸಂಸ್ಥೆಯ ಆವರಣವನ್ನು ಬಾವುಟ, ಚಪ್ಪರ, ಹೂವುಗಳು ಹಾಗೂ ಬಂಟಿಂಗ್‌ನಿಂದ ಅಲಂಕರಿಸುವುದರೊಂದಿಗೆ ಹಬ್ಬದ ವಾತಾವರಣ ಸೃಷ್ಟಿಸಲಾಯಿತು. 40 ಅಡಿ ಉದ್ದದ ಕನ್ನಡ ಬಾವುಟವನ್ನು ಹಾರಿಸಿ, ನಾಡಗೀತೆ ಹಾಡಲಾಯಿತು.

ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಕನ್ನಡ ಮಾತೆಗೆ ಆರತಿ ಬೆಳಗುವುದರ ಮೂಲಕ ಗೌರವ ಸಲ್ಲಿಸಿದರು. ನಂತರ ಕರ್ನಾಟಕದ ವಿಶಿಷ್ಟ ತಿನಿಸುಗಳನ್ನೊಳಗೊಂಡ ವಿಶೇಷ ಭೋಜನವನ್ನು ವಿದ್ಯಾರ್ಥಿಗಳು ಬಡಿಸಿದರು. ಅಲ್ಲದೆ, ಕ್ರೀಡೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸ್ಥಳೀಯ, ಸಾಂಪ್ರದಾಯಿಕ ಆಟಗಳನ್ನು ಇತರ ರಾಜ್ಯಗಳ ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು. ಕನ್ನಡೇತರ ರಾಜ್ಯಗಳ ವಿದ್ಯಾರ್ಥಿಗಳು ಕನ್ನಡ ಹಾಡುಗಳನ್ನು ಹಾಡಿದರು ಮತ್ತು ಹಾಡಿಗೆ ತಕ್ಕಂತೆ ನರ್ತಿಸಿದರು. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ತಂಡಗಳ ನಡುವೆ ನಡೆದ ಕಬಡ್ಡಿ ಪಂದ್ಯ ಮತ್ತು ಜಾನಪದ ನೃತ್ಯ ಪ್ರದರ್ಶನವನ್ನು ಗಮನ ಸೆಳೆಯಿತು. ಶೈಕ್ಷಣಿಕ ವಿಭಾಗದ ಉಪ ನಿರ್ದೇಶಕ ಡಾ. ಗಾಯತ್ರಿ ರಾಜ್ಯೋತ್ಸವ ಶುಭಾಶಯ ಕೋರಿದರು.